

# ಸೌಂದರ್ಯಾನುಭೂತಿಯ ಮೇರುಶಿಖರಗಳು

**‘ನಹಿ ಸೂರ್ಯ ನಹಿ ಜ್ಯೋತಿಃ ಶಶಾಂಕ ಸುಂದರ**
**ಭಾಸೆ ವ್ಯೋಮೆ ಛಾಯಾಸಮ ಛವಿ ವಿಶ್ವ ಚರಾಚರ...’**

‘ಅಲ್ಲಿ ಸೂರ್ಯನಿಲ್ಲ, ಜ್ಯೋತಿಯಿಲ್ಲ, ಸುಂದರ ಶಶಾಂಕನಿಲ್ಲ. ಆ ಮಹಾಶೂನ್ಯದಲ್ಲಿ ಛಾಯಾಸಮನಾದ ವಿಶ್ವ ತೇಲುತ್ತಿದೆ’ — ಸ್ವಾಮಿ ವಿವೇಕಾನಂದರ ‘**ಪ್ರಲಯ ಅಥವಾ ಗಭೀರ ಸಮಾಧಿ**’ ಎಂಬ ಕವನದ ಈ ಸಾಲುಗಳು ಕಠೋಪನಿಷತ್ತಿನ ‘**ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ**’ ಎಂಬ ಮಂತ್ರವನ್ನು *(ಕಠ.೫.೧೫)* ನೆನಪಿಸುವಂತಿದೆ. ಆಧ್ಯಾತ್ಮಿಕ ಅನುಭೂತಿಯ ಅತ್ಯುಚ್ಚ ನೆಲೆಯಲ್ಲಿ ಹೊರಹೊಮ್ಮಿದ ಕವಿತೆಯ ಸಾಲುಗಳು ಮಾತು-ಆಲೋಚನೆಗಳಿಗೆ ನಿಲುಕದ ಒಂದು ಅಪೂರ್ವ ಅನುಭವವನ್ನು ವರ್ಣಿಸುವ ಸಾಹಸ ಮಾಡುತ್ತವೆ. ಆ ತಾದಾತ್ಮ್ಯದ ಭರದಲ್ಲಿ ಮೂಡಿಬರುವ ಸಾಲುಗಳು ತನ್ನದೋ, ಇತರರದೋ, ಉಪನಿಷತ್ತಿನದೋ ಎಂದೆಲ್ಲ ಪ್ರತ್ಯೇಕಗೊಳಿಸಲಾಗದಂಥ, ವ್ಯಕ್ತಿ ಭಾವವನ್ನು ಮೀರಿನಿಂತ ದಿವ್ಯಾನುಭವದ ಸಾಂದ್ರತೆಯ ಅನುಭವವನ್ನು ಚಿತ್ರಿಸುತ್ತವೆ. ಸಾಮಾನ್ಯವಾಗಿ ಸೂರ್ಯ, ಚಂದ್ರ, ಪ್ರಕೃತಿ ಇವೆಲ್ಲ ಸೌಂದರ್ಯದ ಪ್ರತೀಕಗಳಾಗಿ ಕಂಡುಬರುತ್ತವೆ; ಸಾಧಾರಣ ಕವಿಯ ಭಾವಕ್ಕೆ ವಸ್ತುವಾಗುತ್ತವೆ. ಆದರೆ ಇಲ್ಲಿ ಅವಾವುದೂ ಇಲ್ಲದ ಒಂದು ಶೂನ್ಯತೆಯ ಗಾಢ ಅನುಭವದ ಚಿತ್ರಣವಿದೆ. ಸಹಜ, ಸಾಮಾನ್ಯ ಚಿತ್ರವನ್ನು ಮೀರಿ ನಿಂತ, ಅತೀತದ ನೆಲೆಯ ಒಂದು ಭಾವನೆಯನ್ನು ಬಿಂಬಿಸುವ ಈ ಕವಿತೆಯಲ್ಲಿ ಭವ್ಯತೆಯೂ ಇದೆ, ದಿವ್ಯತೆಯೂ ಇದೆ. ಮಾನವ ಮನಸ್ಸಿನ ಸೌಂದರ್ಯ ಪ್ರಜ್ಞೆಯ ಅತ್ಯುನ್ನತ ಶ್ರೇಣಿಯ ಬೆಳ್ಳಿಯ ರೇಖೆಗಳು ಇಲ್ಲಿ ಬೆಳಗುತ್ತಿವೆ.

## ಸಂಸ್ಕೃತಿಯ ಒಂದು ಲಕ್ಷಣ

ಸೌಂದರ್ಯಾಭಿವ್ಯಕ್ತಿ ಎಂಬುದು ಸಂಸ್ಕೃತಿಯ ವಿವಿಧ ಮಜಲುಗಳಲ್ಲಿ , ಬೆಳವಣಿಗೆಯ ಹಲವು ಹಂತಗಳಲ್ಲಿ ಅನೇಕ ರೀತಿ ಕಂಡುಬರುತ್ತವೆ. ಸಂಸ್ಕೃತಿ ವ್ಯಕ್ತವಾಗುವುದು ಹಲವು ಬಗೆಗಳಲ್ಲಿ ; ಅದರ ಒಂದು ಬಗೆಯೇ ಸೌಂದರ್ಯಾಭಿವ್ಯಕ್ತಿ. ಜನಪದರ ಜೀವನದಲ್ಲಿ ಇದು ಕಂಡುಬರುವುದು ಅವರ ದೈನಂದಿನ ಬದುಕಿನ ಒಂದು ಅಂಗವಾಗಿ. ಹಾಡು, ಕುಣಿತ, ಗೃಹಾಲಂಕಾರ, ಹಬ್ಬ-ಹರಿದಿನ, ಕುಸುರಿ ಕಲೆ ಹೀಗೆ ಹಲವು ವೈವಿಧ್ಯತೆಗಳಿಂದ ಜನಸಾಮಾನ್ಯರು ತಮ್ಮ ಕಲೆ, ಸೌಂದರ್ಯಪ್ರಜ್ಞೆ ಇವುಗಳನ್ನು ಅಭಿವ್ಯಕ್ತಿಗೊಳಿಸಿ ಆನಂದವನ್ನು ಕಾಣುತ್ತಾರೆ. ಇದೇ ಕಲೆ ವಿಕಾಸಗೊಳ್ಳುತ್ತ ಶಾಸ್ತ್ರೀಯ ಕಲೆಗಳಾಗಿ ಮಾರ್ಪಾಡು ಹೊಂದಬಹುದು; ಅಂತೆಯೇ ಮೂಲರೂಪ ಹಾಗೂ ಪರಿವರ್ತಿತ ರೂಪಗಳು ಹಲವೆಡೆ ಉಳಿದುಕೊಳ್ಳಬಹುದು. ಸಮಾಜ ಅಥವಾ ಸಂಸ್ಕೃತಿ ಸೌಂದರ್ಯವೆಂಬ ಪರಿಕಲ್ಪನೆಯನ್ನು ಆರಂಭದಿಂದಲೂ ಗುರುತಿಸಿಕೊಂಡಿತ್ತು; ಅದೇ ಮುಂದೆ ಬೆಳೆಯುತ್ತ ಕಾಲಕ್ರಮದಲ್ಲಿ ಅತಿಶ್ರೇಷ್ಠ ಕಲಾರೂಪಗಳನ್ನೂ, ಕಲಾವಿದರನ್ನೂ ಸೃಷ್ಟಿಸುವುದು ಎಂಬುದು ಇಲ್ಲಿ ಮುಖ್ಯ.

ಎಲ್ಲ ಸಂಸ್ಕೃತಿಗಳಲ್ಲೂ ಕಲಾಭಿವ್ಯಕ್ತಿ, ಸೌಂದರ್ಯೋಪಾಸನೆ ಹಲವು ಬಗೆಗಳಲ್ಲಿ ನಡೆದಿವೆ. ಆಯಾ ಸಮಾಜಗಳ ಅಭಿರುಚಿ, ಜ್ಞಾನಸಂಪನ್ನತೆ, ಸೃಜನಶಕ್ತಿಗಳಿಗನುಗುಣವಾಗಿ ಅವುಗಳ ನಡುವೆ ವ್ಯಾಪಕವಾದ ಭಿನ್ನತೆ, ವೈವಿಧ್ಯಮಯವಾದ ಅಭಿವ್ಯಕ್ತಿಕ್ರಮ ಕಂಡುಬರುವುದು ಸಹಜ. ಆದರೆ ಈ ಅಭಿವ್ಯಕ್ತಿಗಳಲ್ಲಿ ಶ್ರೇಷ್ಠತೆಯ ಮಾನದಂಡವೇನು? ಶ್ರೇಷ್ಠತೆಯನ್ನು ತಮ್ಮ ಸಮಾಜ, ಸಂಸ್ಕೃತಿಯೊಳಗೆಯೇ ಕಾಣಬೇಕೇ ಅಥವಾ ಇನ್ನಿತರ ಸಮಾಜ-ಸಂಸ್ಕೃತಿಯ ಕಲೆ, ಸೌಂದರ್ಯಭಿವ್ಯಕ್ತಿಗಳೊಂದಿಗೆ ಹೋಲಿಸಿ ನೋಡಬೇಕೆ? - ಈ ಎಲ್ಲ ಚರ್ಚೆಗಳು ಹಲವಾರು ಶತಮಾನಗಳಿಂದ ನಡೆದಿವೆ. ಎಲ್ಲ ವಿರೋಧಾಭಾಸಗಳ, ಗೊಂದಲಗಳ ನಡುವೆ ಕೆಲವೊಂದು ಸಮಾನಾಭಿಪ್ರಾಯಗಳಿವೆ: ೧) ಸೌಂದರ್ಯಾಭಿವ್ಯಕ್ತಿಯ ಶ್ರೇಷ್ಠತೆಯನ್ನು ಜನರೇ ಗುರುತಿಸಿ ಆದರಿಸುತ್ತಾರೆ. ೨) ಶ್ರೇಷ್ಠವಾದ ಕಲೆ, ಕಲಾವಿದ ಹಾಗೂ ಅಭಿವ್ಯಕ್ತಿಕ್ರಮ ಬಹುಕಾಲ ಉಳಿಯುತ್ತದೆ; ಸಮಾಜವನ್ನು ಪ್ರಭಾವಿಸುತ್ತದೆ. ೩) ಇತರ ಸಂಸ್ಕೃತಿ, ಸಮಾಜದೊಂದಿಗೆ ಹೋಲಿಕೆ, ಕೊಡು-ಕೊಳ್ಳುವಿಕೆ ಸಹಜಕ್ರಿಯೆ; ಆದರೆ ಎಲ್ಲ ಸಮಾಜಕ್ಕೂ ಅದರದೇ ಆದ ಸ್ವಂತಿಕೆಯಿರುತ್ತದೆ. ೪) ಲಲಿತಕಲೆ ಇತ್ಯಾದಿಗಳನ್ನು ಮೀರಿ ಸೌಂದರ್ಯಾಭಿವ್ಯಕ್ತಿ ಜೀವನದ ಹಲವು ಕಾರ್ಯಗಳ ಮೂಲಕ ವ್ಯಕ್ತವಾಗಬಹುದು. ಉದಾಹರಣೆಗೆ, ಕೆಲಸ ಮಾಡುವ ರೀತಿ. ‘ಸೌಂದರ್ಯಪ್ರಜ್ಞೆ’ ಎಲ್ಲರಲ್ಲೂ ವ್ಯಕ್ತವಾಗಬಹುದಾದ, ಎಲ್ಲ ಕ್ರಿಯೆಗಳಲ್ಲೂ ವ್ಯಕ್ತಗೊಳಿಸಬಹುದಾದ ಒಂದು ಗುಣ. ೫) ‘ಅಭಿವ್ಯಕ್ತಿ’ ಎಂದರೆ ಸೌಂದರ್ಯಪ್ರಜ್ಞೆ ಪ್ರಕಟವಾಗುವ, ಕಾರ್ಯರೂಪದಲ್ಲಿ ಕಾಣಿಸಿಕೊಳ್ಳುವ ಬಗೆ ಎಂದರ್ಥ; ಆದ್ದರಿಂದ ಸಂಸ್ಕೃತಿಗಳಲ್ಲಿ ಕಂಡುಬರುವ ಸೌಂದರ್ಯಾಭಿವ್ಯಕ್ತಿಯನ್ನು ಎಲ್ಲೆಡೆ **ಕಾರ್ಯರೂಪ**ದಲ್ಲೇ ಗುರುತಿಸಿನೋಡಬೇಕು.

## ಜನಜೀವನದಲ್ಲಿ ಸೌಂದರ್ಯಪ್ರಜ್ಞೆ ಮತ್ತು ಅಭಿವ್ಯಕ್ತಿ

ಸೌಂದರ್ಯವನ್ನು ಕಾಣುವ ಗುಣ ಮತ್ತು ಹಲವು ರೀತಿ ಅದನ್ನು ವ್ಯಕ್ತಗೊಳಿಸುವ ಗುಣ ಕೆಲವೇ ವ್ಯಕ್ತಿಗಳಿಗೆ ಸೀಮಿತವಲ್ಲ. ಈ ಗುಣ ಎಲ್ಲರಲ್ಲೂ ಇದೆ. ಆದರೆ ಅವರವರ ಮನೋಭಾವ, ಅಭಿರುಚಿಗಳಿಗೆ ತಕ್ಕಂತೆ ಅದು ಬೇರೆ ಬೇರೆ ಕಡೆ, ಬೇರೆ ಬೇರೆ ರೀತಿ ವ್ಯಕ್ತವಾಗು

ವುದು ಅಷ್ಟೆ. 'ನಿನ್ನಲ್ಲಿ ಸೌಂದರ್ಯಪ್ರಜ್ಞೆಯೇ ಇಲ್ಲ' ಎಂದು ಬಯ್ಯುವವರಿದ್ದಾರೆ. ಇದು ಅವರ ಅಜ್ಞಾನವನ್ನು ತೋರಿಸುತ್ತದೆ. ತನ್ನೆದುರಿಗೆ ಇರುವ ವ್ಯಕ್ತಿಯಲ್ಲಿ ಸೌಂದರ್ಯ ಪ್ರಜ್ಞೆ ಇಲ್ಲವೆಂದು ಇವನು ಹೇಗೆ ತಿಳಿದನು? ತಾನು ಎಲ್ಲಿ ಹುಡುಕಿದ್ದನೋ ಅಲ್ಲಿ ಅದು ಕಾಣಿಸಲಿಲ್ಲವೆಂದು ಮಾತ್ರ. ಅದು ಇನ್ನೊಂದಡೆ ಇರಬಹುದಲ್ಲ? ಹಾಗೆ ಇನ್ನೊಂದೆಡೆ ವ್ಯಕ್ತವಾದ ಅವನ ಸೌಂದರ್ಯಪ್ರಜ್ಞೆಯನ್ನು ಇವನು ಕಾಣಲಿಲ್ಲವೆಂದರೆ ಅದು ಅಜ್ಞಾನವೆಂದೇ ಅರ್ಥ.

ಆದರೆ ಸೌಂದರ್ಯ ಪ್ರಜ್ಞೆಯಲ್ಲೂ ಅದರ ಅಭಿವ್ಯಕ್ತಿಯಲ್ಲೂ ತರ-ತಮಭೇದವಿದೆ ಎನ್ನುವುದು ನಿಜ. ಇಲ್ಲಿ ಯಾವುದು ಉತ್ತಮ ವೆಂಬುದನ್ನು ನಿರ್ಣಯಿಸುವವರು ಜನರೇ. ಕಲಾಪ್ರಕಾರಗಳಲ್ಲಿ ಅವರನ್ನು 'ಸಹೃದಯರು' ಎನ್ನುತ್ತಾರೆ. ಪ್ರೇಕ್ಷಕರು, ಓದುಗರು ಅಥವಾ ಕಲೆಯನ್ನು ಆಸ್ವಾದಿಸುವವರು ಕಲಾವಿದನ ಸೌಂದರ್ಯ ಪ್ರಜ್ಞೆಯನ್ನು ಮೆಚ್ಚಿ ಪ್ರೋತ್ಸಾಹಿಸುತ್ತಾರೆ; ಕಲಾವಿದನೂ ಬೆಳೆ ಯುತ್ತ, ಇನ್ನಷ್ಟು ಕಲಾಕೃತಿಗಳನ್ನು ರಚಿಸುತ್ತಾನೆ.

ಯಾವುದು ಸೌಂದರ್ಯ? ಯಾವುದನ್ನು ಸೌಂದರ್ಯಪ್ರಜ್ಞೆ ಎನ್ನಬೇಕು? ಇದನ್ನು ಅರ್ಥಮಾಡಿಕೊಳ್ಳಲು ಅಸ್ತವ್ಯಸ್ತವಾದ ಒಂದು ಚಿತ್ರವನ್ನು ಕಲ್ಪಿಸಿಕೊಳ್ಳಬೇಕು. ಎಲ್ಲೆಲ್ಲೂ ಕಸ ತುಂಬಿರುವ ಒಂದು ಕೋಣೆ; ಧೂಳು, ಜೇಡರಬಲೆ, ವಾಸನೆ ಇವುಗಳಿಂದ ಬೇಸರ ಬರಿಸುತ್ತದೆ. 'ಕೋಣೆಯೊಳಕ್ಕೆ ಯಾಕಾದರೂ ಕಾಲಿಟ್ಟೆನೋ' ಎಂದು ಶಪಿಸುವಂತಾಗುತ್ತದೆ. ಇದು ಶಿಸ್ತುಬದ್ಧತೆಯಿಲ್ಲದ, 'ಸಂಸ್ಕಾರ' ವಿಲ್ಲದ, ಅವ್ಯವಸ್ಥೆಯ ಒಂದು ಚಿತ್ರ. ಕೇವಲ ಕೋಣೆಯಷ್ಟೇ ಅಲ್ಲ; ವಿವಿಧ ಸ್ಥಳಗಳಿಗೂ ಇದನ್ನು ಅನ್ವಯಿಸಬಹುದು. ಅಂತೆಯೇ ನಮ್ಮ ದೇಹ, ನಮ್ಮ ಮನಸ್ಸು, ನಮ್ಮ ಜೀವನ – ಎಲ್ಲವಕ್ಕೂ ಇದನ್ನು ವಿಸ್ತ ರಿಸಬಹುದು. (ಬಸವಣ್ಣನವರ 'ಮನೆಯೊಳಗೆ ಮನೆಯೊಡೆಯ ನಿದ್ದಾನೋ ಇಲ್ಲವೋ' ಎಂಬ ವಚನವನ್ನಿಲ್ಲಿ ನೆನೆಯಬೇಕು!) ಒಟ್ಟು ಮನಃಸ್ಥಿತಿಯೇ ಶೂನ್ಯವಾಗಿರುವ, ಜೀವಂತಿಕೆಯಿಲ್ಲದ ಈ ಸ್ಥಿತಿಯಲ್ಲಿ ಯಾವ ಸೌಂದರ್ಯವನ್ನೂ ನಾವು ಕಾಣಲಾರೆವು.

ಇನ್ನು ಮುಂದಿನ ಚಿತ್ರ: ಚೆನ್ನಾಗಿ ಗುಡಿಸಿ, ಒರೆಸಿ, ಅಚ್ಚುಕಟ್ಟಾಗಿ ರುವ ಕೋಣೆ. ಅಲ್ಲೆಲ್ಲೂ ಬೇಸರ ಬರಿಸುವ ಧೂಳು, ಕಸ, ದುರ್ವಾ ಸನೆಗಳಿಲ್ಲ, ಎಲ್ಲವೂ ಸಹಜವೆನಿಸುತ್ತದೆ. 'ಸ್ವಲ್ಪ ಹೊತ್ತು ಇಲ್ಲೇ ಇರೋಣ' ಅನಿಸುತ್ತದೆ. ಇಲ್ಲಿ ಜೀವನೋತ್ಸಾಹವಿದೆ, ಬದುಕಿಗೆ ಅಸ್ತಿತ್ವವಿದೆ. ಸಮಾಜದಲ್ಲಿ ಸಹ್ಯವೆನಿಸುವ ಜೀವನ ನಡೆಸಲು ಇದು ಮೂಲಭೂತವಾಗಿ ಅಗತ್ಯ. ಇತರರಿಗೆ ಅಸಹ್ಯವೆನಿಸದಂತೆ ಬದು ಕಲು ಕಡೆಯ ಪಕ್ಷ ಅಚ್ಚುಕಟ್ಟಾಗಿ ಬದುಕನ್ನು ರೂಪಿಸಿಕೊಳ್ಳಬೇಕಾಗು ತ್ತದೆ. ಇದನ್ನು ಮೀರಿದರೆ ಜನರು ದೂರವಾಗುತ್ತಾರೆ, ಎಲ್ಲರೂ ದೂಷಿಸಲು ತೊಡಗುತ್ತಾರೆ. ನಮ್ಮ ದೈನಂದಿನ ಜೀವನದಲ್ಲಿ ಈ ಕನಿಷ್ಠ ಅಗತ್ಯವನ್ನಾದರೂ ನಾವು ಮಾಡಲೇಬೇಕಾಗುತ್ತದೆ. ಆದರೆ ಇಲ್ಲೂ ನಾವು 'ಸೌಂದರ್ಯ'ವನ್ನು ಕಾಣಲಾಗದು.

ಎರಡನೇ ಹಂತವನ್ನು ಮೀರಿದ ನಂತರವೇ ನಿಜವಾದ ಸೌಂದರ್ಯ ಪ್ರಜ್ಞೆ ಗೋಚರಿಸುವುದು. ಈ ಚಿತ್ರಣವನ್ನು ನೋಡಿ: ಅಚ್ಚುಕಟ್ಟಾಗಿ ರುವ ಅದೇ ಕೋಣೆಯಲ್ಲಿ ರಂಗವಲ್ಲಿ ಹಾಕಿದ್ದಾರೆ. ಗಂಧದ ಕಡ್ಡಿಯ ಸುಗಂಧ ಮೃದುವಾಗಿ ಆವರಿಸಿದೆ. ಕಿಟಕಿ ಬಳಿ ಹೂ, ಬಳ್ಳಿ ಇಣುಕಿ ನೋಡುತ್ತಿವೆ. ಹಿತವಾಗುವಂತೆ ಬೆಳಕು ಕೋಣೆಯನ್ನೆಲ್ಲಾ ಬೆಳಗಿದೆ. ಯಾವುದೂ ಅತಿಯಿಲ್ಲ; ಎಲ್ಲೆಲ್ಲೂ ಗೃಹಿಣಿಯ ಸೌಂದರ್ಯ ಪ್ರಜ್ಞೆ ಎದ್ದು ಕಾಣುವಂತಿದೆ. ಆಗಂತುಕನು ಒಂದುಕ್ಷಣ ಮೈಮರೆಯುತ್ತಾನೆ; ಆ ಕೋಣೆಯ ಆಪ್ಯಾಯಮಾನ ಸನ್ನಿವೇಶಕ್ಕೆ ಮಾರುಹೋಗುತ್ತಾನೆ.

ಹೌದು, ಇದೇ ಸೌಂದರ್ಯಾಭಿವ್ಯಕ್ತಿ. ಇದನ್ನೇ ನಾವು ಎಲ್ಲೆಡೆ ಅನ್ವಯಿಸಿಕೊಳ್ಳಬಹುದು. ಉದಾಹರಣೆಗೆ ಭಾಷೆ. ಆಡುಭಾಷೆಯಿರಲಿ, ಬರವಣಿಗೆಯಿರಲಿ — ಪ್ರತಿಯೊಬ್ಬರೂ ಕೆಲವೊಂದು ಭಾಷೆಯ ಜಾಯಮಾನ, ನಿಯಮಗಳನ್ನು ಅರಿತುಕೊಂಡೇ ಪ್ರಯೋಗಿಸು ತ್ತಾರೆ. ಈ ನಿಯಮಗಳಿಲ್ಲದೆ ಭಾಷೆಯನ್ನಾಡಿದರೆ ಆಭಾಸವಾಗು ತ್ತದೆ; ಜನರು ಅದನ್ನು ತಿರಸ್ಕರಿಸುತ್ತಾರೆ. ಬೇರೆ ಭಾಷೆಯವರು ನಮ್ಮ ಭಾಷೆಯನ್ನು ಕಲಿಯುವಾಗ ತಪ್ಪು ಮಾಡುತ್ತಾರೆ; ಅಂಥವೇಳೆ ಹಲವು ಬಾರಿ ಅವರು ಅಪಹಾಸ್ಯಕ್ಕೊಳಗಾಗುತ್ತಾರೆ. ಬರವಣಿಗೆ ಯಲ್ಲೂ ಹೀಗೆ — ವ್ಯಾಕರಣ ತಪ್ಪು, ಕಾಗುಣಿತ ತಪ್ಪುಗಳಿದ್ದಾಗ ಓದುವುದು ಅಸಹ್ಯವಾಗುತ್ತದೆ; ಆ ಬರಹ ತಿರಸ್ಕಾರ ಮೂಡಿಸುತ್ತದೆ.

ಭಾಷೆಯ ಬಳಕೆಯಲ್ಲಿ ಮುಂದಿನ ಹಂತವೇ – ಗಾದೆ, ನುಡಿ ಗಟ್ಟು, ಕವಿತೆ, ಅಲಂಕಾರ ಇತ್ಯಾದಿಗಳ ಬಳಕೆ. ಆಡುಮಾತಿನಲ್ಲೂ, ಬರಹದಲ್ಲೂ ಈ ಬಗೆಯ ಭಾಷೆಯಲ್ಲಿ ನಾವು ಸೌಂದರ್ಯವನ್ನು ಕಂಡು, 'ಭಾಷೆ ಚೆನ್ನಾಗಿದೆ', 'ಶೈಲಿ ಸೊಗಸಾಗಿದೆ' – ಎನ್ನುತ್ತೇವೆ. ಇದನ್ನೇ ನಾವು ಪ್ರತಿಯೊಂದು ಕ್ರಿಯೆಯಲ್ಲೂ , ಪ್ರತಿಯೊಂದು ವಸ್ತುವಿನಲ್ಲೂ ಗಮನಿಸಿ ನೋಡಬಹುದು. ನಿಜವಾದ ಸೌಂದರ್ಯ ಪ್ರಜ್ಞೆ ಇರುವವನು ಸಮಸ್ತ ಜಗತ್ತಿನಲ್ಲಿ ಸೌಂದರ್ಯವನ್ನೇ ಕಾಣು ತ್ತಾನೆ. ಅವನ ನಡೆ-ನುಡಿ, ಕ್ರಿಯೆ, ಮಾತು ಎಲ್ಲವೂ ಸೌಂದರ್ಯಾಭಿ ವ್ಯಕ್ತಿಯಾಗಿರುತ್ತದೆ. ಆದರೆ ಎಲ್ಲರಲ್ಲೂ ಅದು ಒಂದೇ ರೀತಿ ಇರ ಲಾರದು; ಒಬ್ಬೊಬ್ಬರಲ್ಲಿ ಒಂದೊಂದು ಪ್ರಮಾಣದಲ್ಲಿ, ಒಂದೊಂದು ಕ್ಷೇತ್ರದಲ್ಲಿ ವ್ಯಕ್ತವಾಗುವುದು.

## ಸೌಂದರ್ಯ ಪ್ರಜ್ಞೆ : ಮನಸ್ಸಿನ ಸೂಕ್ಷ್ಮ ಗುಣ

'ಪ್ರಜ್ಞೆ'ಯೆಂಬ ಪದದ ಅರ್ಥ, 'ವಿಶೇಷವಾದ ಅರಿವು' ಎಂದು. ಒಂದರ್ಥದಲ್ಲಿ , ತನ್ನ ಇರುವಿಕೆಯ ಅರಿವು, ತನ್ನತನದ ಅರಿವು, ತನ್ನ ಸ್ವಂತಿಕೆಯ ಅರಿವು ಎಂದೆಲ್ಲ ಇದನ್ನು ವಿವರಿಸಬಹುದು. 'ಇದು ಹೀಗಿದ್ದರೆ ಒಳ್ಳೆಯದು', 'ಈ ರೀತಿ ಮಾಡಿದರೆ ಚೆನ್ನಾಗಿರುತ್ತದೆ' ಎಂದು ಅರಿತುಕೊಂಡು ಒಂದು ಕೆಲಸವನ್ನೋ, ಕಲೆಯನ್ನೋ ಮಾಡಿ ದರೆ ಅದು ಉತ್ತಮವಾಗಿರುತ್ತದೆ; ಅದು ಹಲವರ ಗಮನವನ್ನು ಸೆಳೆಯುತ್ತದೆ. ಹೀಗೆ ಜೀವನದಲ್ಲಿ ಸೌಂದರ್ಯವನ್ನು ಕಂಡುಕೊಳ್ಳು ವುದು, ಅದನ್ನು ವ್ಯಕ್ತಗೊಳಿಸುವುದು ಮನಸ್ಸಿನ ಒಂದು ವಿಶೇಷ ಗುಣ. ಮಾನಸಿಕ ತೊಂದರೆ, ಚಿಂತೆ, ಗೊಂದಲಗಳಿಂದ ಬಳಲುವವ ರಿಗೆ ಇದು ಅಸಾಧ್ಯವಾದ ಕೆಲಸ. ಜೀವನದ ಪ್ರಾಥಮಿಕ ಆವಶ್ಯ ಕತೆಗಳು ಪೂರೈಸಿದಾಗ ಮಾತ್ರ ಕಲೆ, ಸೌಂದರ್ಯಗಳು ಉತ್ಕರ್ಷ ಗೊಳ್ಳುವುವು ಎಂದು ನಾವು ಇತಿಹಾಸದಲ್ಲಿ ಓದಿರುವುದರ ಅರ್ಥ ಇದೇ. ದೈಹಿಕ, ಮಾನಸಿಕ ಸ್ಥಿತಿಗತಿಗಳು ಚೆನ್ನಾಗಿರುವಾಗ ಮಾತ್ರ ಮನಸ್ಸು ಸೃಜನಶೀಲವಾಗಿ, ಸೌಂದರ್ಯಪ್ರಜ್ಞೆಯಿಂದ ಕೆಲಸ ಮಾಡುವುದು. ಅಂಥ ಮನಸ್ಥಿತಿ ಸೂಕ್ಷ್ಮವಾದುದು. ಚಿಂತನೆ, ತರ್ಕ, ಬುದ್ಧಿವಂತಿಕೆ, ಹೃದಯವಂತಿಕೆ ಇವೆಲ್ಲ ಅಲ್ಲಿ ಒಟ್ಟಾಗಿ ಕೆಲಸ ಮಾಡು ವುವು. ಸಂತಸ, ಆನಂದ, ಕ್ರಿಯಾಶೀಲತೆ, ಹೊಸತನ್ನು ಕಾಣುವ ಹಂಬಲ — ಇವು ವ್ಯಕ್ತಿಯೊಬ್ಬನ ಸೌಂದರ್ಯಪ್ರಜ್ಞೆಯನ್ನು

ಪ್ರಚೋದಿಸಿ, ಉತ್ತಮ ಅಭಿವ್ಯಕ್ತಿಗೆ ಪ್ರೇರಣೆ ನೀಡುತ್ತದೆ. 'ಪ್ರತಿ ಕ್ಷಣವೂ ಹೊಸಹೊಸತನ್ನು ಕಾಣುವ ಹಾಗೂ ಸೃಷ್ಟಿಸುವ ಪ್ರಜ್ಞೆಯೇ ಪ್ರತಿಭೆ ಎನಿಸುವುದು' ಎಂಬ ಮಾತು ಸಂಸ್ಕೃತದಲ್ಲಿ ಬಹಳ ಪ್ರಸಿದ್ಧವಾಗಿದೆ. ಕಾವ್ಯವನ್ನು ಕುರಿತು ಹೇಳಿರುವ ಈ ಮಾತು ಸೌಂದರ್ಯ ಪ್ರಜ್ಞೆಯಿರುವ ಎಲ್ಲರಿಗೂ ಅನ್ವಯಿಸುತ್ತದೆ.

ಮನಸ್ಸಿನ ಸೂಕ್ಷ್ಮತೆಯೆಂಬುದು ಕೋಲ್ಮಿಂಚಿನಲ್ಲಿ ಗೋಚರಿಸುವ ಬೆಳ್ಳಿಯ ರೇಖೆಯಂತೆ. ಅದು ಸುತ್ತಮುತ್ತ ಬೆಳಕನ್ನು ಹಬ್ಬಿಸುವುದು, ಬಳ್ಳಿಯಂತೆ ಬಳುಕುತ್ತ ವ್ಯಾಪಿಸುತ್ತ ಚೆಲುವನ್ನು ನೀಡುವುದು, ಹಾಗೂ ಒಂದು ಕ್ಷಣದ ಮಿಂಚಿನ ಪುಳಕ ನೀಡಿ ಎದೆಯಲ್ಲಿ ಉಲ್ಲಾಸವನ್ನುಂಟುಮಾಡುವುದು. ಅಂಥ ಸೂಕ್ಷ್ಮ ಮನಸ್ಸಿನಲ್ಲಿ ಮಿಂಚಿದ ಹೊಸ ಭಾವನೆಯೇ ಸೌಂದರ್ಯವನ್ನು ಕಾಣುವುದು; ಅದನ್ನು ತನ್ನದೇ ಆದ ರೀತಿಯಲ್ಲಿ ಅಭಿವ್ಯಕ್ತಿಗೊಳಿಸುವುದು. ಕಲೆ, ಸಂಗೀತ, ನಾಟ್ಯ, ಕರಕುಶಲ ಕಲೆ, ಯಾವುದೇ ಉತ್ತಮ ಹಾಗೂ ಸೌಂದರ್ಯ ಪೂರ್ಣ ಕೆಲಸ ಇವೆಲ್ಲ ವ್ಯಕ್ತವಾಗುವುದು ಹೀಗೆ.

### ಸೌಂದರ್ಯ ಪ್ರಜ್ಞೆ ಮತ್ತು ಭವ್ಯತೆ

ಸೂಕ್ಷ್ಮ ಮನಸ್ಸಿನ, ಸೃಜನಶೀಲವಾದ ಅಭಿವ್ಯಕ್ತಿಯಿಂದ ಕಲೆ ಹೊರಹೊಮ್ಮುವುದು; ಸೌಂದರ್ಯ ಪ್ರಜ್ಞೆ ಕಲಾನುಭವವಾಗಿ ಪರಿಗಣಿಸಲ್ಪಡುವುದು. ಆದರೆ ಇದನ್ನು ಮೀರಿದ ಇನ್ನೊಂದು ಹಂತವಿದೆ. ಅಲ್ಲಿ ಸೌಂದರ್ಯ ಪ್ರಜ್ಞೆಯುಳ್ಳವನು 'ನುರಿತ ಕಲಾವಿದ'ನಾಗುತ್ತಾನೆ; ಸೌಂದರ್ಯದ ರಹಸ್ಯವನ್ನು ಅರಿತು, ಅದರ ಹೃದಯ ವೀಣೆಯನ್ನು ಮಿಡಿಯುವ ಕಲೋಪಾಸಕನಾಗುತ್ತಾನೆ. ಅಲ್ಲಿ ಅವನು ಕಾಣುವುದು ಎಲ್ಲ ಮಿತಿಯನ್ನು ಮೀರಿದ, ಎಲ್ಲ ಅಲ್ಪತನವನ್ನೂ ಮೆಟ್ಟಿ ನಿಂತ ಒಂದು ಎತ್ತರದ ಸ್ಥಿತಿಯನ್ನು. ಕೇವಲ ತಾನು ಕಾಣುವುದಷ್ಟೇ ಅಲ್ಲ; ಅಂಥ ಅನುಭವವನ್ನು ಇತರರಿಗೂ ಮಾಡಿಸಬಲ್ಲನು. ಇಂಥ ಉನ್ನತ ಸ್ಥಿತಿಯ ಅನುಭವವೇ ಭವ್ಯತೆ. ಪ್ರತಿಯೊಂದು ಕಲಾ ಪ್ರಕಾರಕ್ಕೂ, ಪ್ರತಿಯೊಂದು ಕ್ರಿಯೆಗೂ ಅದರದೇ ಆದ ಮಿತಿಗಳಿರುತ್ತವೆ. ಉದಾಹರಣೆಗೆ, ಭಾಷೆಗೆ ಶಬ್ದ, ವಾಕ್ಯ, ಅಕ್ಷರಗಳೇ ಮಿತಿ; ಸಂಗೀತಕ್ಕೆ ಸ್ವರ, ಲಯಗಳೇ ಮಿತಿ. ಇದೇ ರೀತಿ ವಿವಿಧ ಕೆಲಸಗಳಲ್ಲಿ. ಬಡಗಿ, ಕಮ್ಮಾರ, ಕುಂಬಾರ, ಇಂಜಿನಿಯರ್, ಕಂಪ್ಯೂಟರ್ ತಜ್ಞ, ಅಧ್ಯಾಪಕ — ಎಲ್ಲ ಕಡೆ ಇಂಥದೇ ಮಿತಿಗಳಿವೆ. ಈ ಮಿತಿಗಳನ್ನು ದಾಟಿ, ಅನಂತತೆಯೆಂಬ ಭಾವದಲ್ಲಿ ತನ್ಮಯವಾದಾಗಲೇ 'ಭವ್ಯತೆ'ಯ ಅನುಭವವಾಗುವುದು. ಕಲಾವಿದ ಕೆಲವು ಕ್ಷಣಗಳ ಮಟ್ಟಿಗಾದರೂ ಇಂಥ ಅನುಭವವನ್ನು ಹೊಂದುತ್ತಾನೆ; ಅದನ್ನೇ ತನ್ನ ಕಲೆಯ (ಅಥವಾ ಯಾವುದೇ ಮಾಧ್ಯಮದ) ಮಿತಿಯೊಳಗೆ ಕಟ್ಟಿಹಾಕಲು ಯತ್ನಿಸುತ್ತಾನೆ. ಎಷ್ಟು ಸಮರ್ಥವಾಗಿ ಅವನು ಆ 'ಭವ್ಯತೆ'ಯ ಅನುಭವವನ್ನು ಇತರರಿಗೆ ಮಾಡಿಸಬಲ್ಲನೋ, ಅಷ್ಟರಮಟ್ಟಿಗೆ ಅವನು ಶ್ರೇಷ್ಠತೆಯನ್ನು ಹೊಂದುತ್ತಾನೆ. ಭಾಸ, ಕಾಳಿದಾಸ, ಪಂಪ, ರನ್ನ, ಬೇಂದ್ರೆಯವರಂಥ ಕವಿಗಳು ಎತ್ತರಕ್ಕೇರಿದ್ದು ಹೀಗೆ. ಇದೇ ರೀತಿ ಬಹಳ ಮಂದಿ ಇಷ್ಟಪಡುವ ಕ್ರೀಡೆ, ರಾಜಕೀಯ, ವಾಣಿಜ್ಯ ಕ್ಷೇತ್ರಗಳಲ್ಲೂ ಇಂಥ ಭವ್ಯತೆಯನ್ನು ಕಂಡುಕೊಂಡವರು, ಇತರರಿಗೂ ಕಾಣಿಸಿದವರು ಇದ್ದಾರೆ ಎಂಬುದು ಅತ್ಯಂತ ಆಶ್ಚರ್ಯದ ಸಂಗತಿಯಲ್ಲವೆ?

### ದಿವ್ಯತೆಯತ್ತ

ಭಾರತದ ಮಹಾಭಾಗ್ಯವೆಂದರೆ, ನಮ್ಮಲ್ಲಿ ಜೀವನದ ಎಲ್ಲ ಕ್ಷೇತ್ರಗಳಲ್ಲೂ ಅಧ್ಯಾತ್ಮ ಹಾಸುಹೊಕ್ಕಾಗಿರುವುದು. ವಿವಿಧ ಮಜಲುಗಳನ್ನು ಬಿಗಿಯಾಗಿ ಹಿಡಿದಿಡುವ ಸೂತ್ರವಾಗಿ ಅಧ್ಯಾತ್ಮ ನಮ್ಮ ದೇಶದಲ್ಲಿ ಕಾಣಿಸಿಕೊಂಡಿದೆ. ತತ್ತ್ವಶಾಸ್ತ್ರ, ಧರ್ಮ, ನೀತಿ, ಜೀವನದ ವಿವಿಧ ಅಂಗಗಳಾದ ಆಡಳಿತ, ನ್ಯಾಯ, ವಾಣಿಜ್ಯ, ಸಾಮಾಜಿಕ ವ್ಯವಸ್ಥೆ, ವಿವಿಧ ವೃತ್ತಿಗಳು – ಎಲ್ಲೆಲ್ಲೂ ಅಧ್ಯಾತ್ಮದ ಪ್ರಭಾವ ಇಲ್ಲಿ ನಿಚ್ಚಳವಾಗಿದೆ. ಕಲೆ, ಸೌಂದರ್ಯಪ್ರಜ್ಞೆ, ಅದರ ಅಭಿವ್ಯಕ್ತಿ ಇವುಗಳಲ್ಲೂ ಆಧ್ಯಾತ್ಮಿಕತೆ ತುಂಬಿತುಳುಕುವಂತಿದೆ. ಇದರಿಂದ ಜೀವನ ಹಾಗೂ ಸಂಸ್ಕೃತಿ ಶ್ರೀಮಂತವಾಗಿದೆ.(ಆಧ್ಯಾತ್ಮಿಕತೆಯ ಪ್ರಭಾವದಿಂದ ಭಾರತೀಯ ಜೀವನ, ಸಂಸ್ಕೃತಿ ಹಾಗೂ ಕಲೆ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡಿದೆ ಎಂದು ವಾದಿಸುವವರಿದ್ದಾರೆ. ಹಲವು ವಿದೇಶೀ ಚಿಂತನೆಗಳಿಂದ ಪ್ರೇರಿತವಾದ ಈ ವಾದವನ್ನು ನಾವು ಒಪ್ಪಲಾರೆವು.) ಇದಕ್ಕಿಂತಲೂ ಹೆಚ್ಚಾಗಿ, ಆಧ್ಯಾತ್ಮಿಕತೆಯು ನಮ್ಮ ಜೀವನ, ಕಲೆ, ಸಂಸ್ಕೃತಿಗಳನ್ನು ಇನ್ನೊಂದು ಅದ್ಭುತ ಆಯಾಮದತ್ತ ಕೊಂಡೊಯ್ದಿದೆ ಎಂಬುದನ್ನಿಲ್ಲಿ ವಿಶೇಷವಾಗಿ ಗಮನಿಸಬೇಕು.

ಹಿಂದೆ ನೋಡಿದಂತೆ ಸೌಂದರ್ಯಪ್ರಜ್ಞೆಯನ್ನು ಕೆಲವು ಮಂದಿ ಶ್ರೇಷ್ಠ ವ್ಯಕ್ತಿಗಳು ಕಲೆಯ ವಿವಿಧ ಪ್ರಕಾರಗಳ ಮಿತಿಯಾಚೆಗೆ ಕರೆದೊಯ್ದು 'ಭವ್ಯತೆ'ಯ ನೆಲೆಗೇರಿಸುತ್ತಾರೆ. ಆ ಮೂಲಕ 'ಸದ್ಯಃ ಪರನಿವೃತಿ'(ಕ್ಷಣಿಕವಾಗಿಯಾದರೂ ತನ್ನನ್ನು ತಾನು ಮರೆಯುವ ಆನಂದ)ಯನ್ನು ಅನುಭವಿಸುವಂತೆ ಮಾಡುತ್ತಾರೆ. ಇದರ ಮುಂದಿನ ಉನ್ನತ ನೆಲೆಯೇ 'ದಿವ್ಯತೆ'. ಕಲಾವಿದನಲ್ಲಿ ಅಥವಾ ಸಹೃದಯದಲ್ಲಿ ಮೂಡಿಮಾಯವಾಗುವ 'ಭವ್ಯತೆ' ಕಾಲದ, ದೇಶದ ಮಿತಿಯನ್ನು ಮೀರಿ ಅನಂತತೆಯತ್ತ ಒಂದು ಇಣುಕುನೋಟವನ್ನು ಬೀರುವುದು. 'ದಿವ್ಯತೆ' ಯಾದರೋ ಎಲ್ಲ ಮಿತಿಗಳಾಚೆ ನೆಲೆನಿಂತ ಶಾಶ್ವತವಾದ, ನಿತ್ಯವೂ ಅನಂತವೂ ಆದ ಪರಬ್ರಹ್ಮನ ಇರುವಿಕೆಯತ್ತ ಒಂದು ನೋಟವನ್ನು ಬೀರುವ ಯತ್ನವನ್ನು ಮಾಡುವುದು. ಋಷಿಗಳೇ ಕವಿಗಳಾಗಿರುವ ನಮ್ಮ ಪರಂಪರೆಯಲ್ಲಿ (ಈ ಪರಂಪರೆ ನಿಂತುಹೋಗಿಲ್ಲ ; ಸ್ವಾಮಿ ವಿವೇಕಾನಂದರಂತಹ ಆಧುನಿಕ ಸಂತರ ಮೂಲಕ ಇದು ಮುಂದುವರಿಯುತ್ತ ಬಂದಿದೆ) ಆಧ್ಯಾತ್ಮಿಕ ಅನುಭೂತಿಯ ರಸವು ಘನೀಭೂತವಾಗಿ ಅಭಿವ್ಯಕ್ತಗೊಂಡಿದೆ. ವ್ಯಾಸ, ವಾಲ್ಮೀಕಿ ಮುಂತಾದ ಮಹಾತ್ಮರಿರಲಿ, ಮೀರಾಬಾಯಿ, ತುಳಸೀದಾಸ, ಬಸವಣ್ಣ, ಪುರಂದರದಾಸರಂಥ ಭಕ್ತಿ ಕವಿಗಳಿರಲಿ, ತಾನಸೇನ, ತ್ಯಾಗರಾಜರಂಥ ನಾದಯೋಗಿಗಳಿರಲಿ, 'ದಿವ್ಯತೆ'ಯನ್ನು ಅನುಭವಿಸಿದರು; ಹೀಗೆ ಪಡೆದ ಆತ್ಮಾನುಭೂತಿಯ ಆಧಾರದಲ್ಲಿ ಸೌಂದರ್ಯಾನುಭೂತಿಯನ್ನು ಕಂಡುಕೊಂಡರು. ಇಂತಹ ಸಂತರ ವೈವಿಧ್ಯಮಯವಾದ ಸೌಂದರ್ಯಾಭಿವ್ಯಕ್ತಿಯೇ ನಮ್ಮ ಸಂಸ್ಕೃತಿಯ ಮೇರುಶಿಖರಗಳು; ನಾಮರೂಪಾತ್ಮಕ ಭೌತಿಕ ಪ್ರಪಂಚದ ಮಿತಿಯನ್ನು ಭೇದಿಸಿ ತಲೆಯೆತ್ತಿ ನಿಂತ, ಅವ್ಯಕ್ತ ನೆಲೆಯತ್ತ ನೋಡಿ ಬೆಳಗುತ್ತಿರುವ ಹಿಮಶಿಖರಗಳು.

### ಜೂನ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೧೦ | ಭಾನುವಾರ | ಏಕಾದಶಿ |
| ೨೩ | ಶನಿವಾರ | ಏಕಾದಶಿ |